# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
(ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 258

ಉತ್ತರಿಸಬೇಕಾದ ದಿನಾಂಕ : 15.02.2023

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ "ಪಶುಭಾಗ್ಯ" ಯೋಜನೆಯಡಿಯಲ್ಲಿ ಇದುವರೆಗೆ ಎಷ್ಟು ಜನ ಫಲಾನುಭವಿಗಳು ಸೌಲಭ್ಯಗಳನ್ನು ಪಡೆದಿದ್ದಾರೆ; | ರಾಜ್ಯದಲ್ಲಿ "ಪಶುಭಾಗ್ಯ" ಯೋಜನೆಯಡಿಯಲ್ಲಿ ಇದುವರೆಗೆ **67,832** ಫಲಾನುಭವಿಗಳು ಸೌಲಭ್ಯಗಳನ್ನು ಪಡೆದಿದ್ದಾರೆ. |
| ಆ | "ಪಶುಭಾಗ್ಯ" ಯೋಜನೆಯಡಿಯಲ್ಲಿ ಫಲಾನುಭವಿಯ ದೀರ್ಘಕಾಲ ಬಾಳಿಕೆ ಬರುವ ಹಾಗೂ ಸಾಕಷ್ಟು ರೋಗ ನಿರೋಧಕ ಶಕ್ತಿಯನ್ನು ಪಡೆದಿರುವ ಮತ್ತು ಸ್ಥಳೀಯ ವಾತಾವರಣಕ್ಕೆ ಸುಲಭವಾಗಿ ಹೊಂದಿಕೊಳ್ಳುವ "ದೇಶಿ ತಳಿ" ಹಸುಗಳನ್ನು ಹೊಂದಲು ಅವಕಾಶ ಕಲ್ಪಿಸಲಾಗಿದೆಯೆ; | "ಪಶುಭಾಗ್ಯ" ಯೋಜನೆಯಡಿಯಲ್ಲಿ ಹೆಚ್ಚು ಹಾಲು ಕೊಡುವ ಮಿಶ್ರ ತಳಿ ಹಸು / ಎಮ್ಮೆ ಹೊಂದಲು ಮಾತ್ರ ಅವಕಾಶವಿದ್ದು, ದೇಶಿ ತಳಿಗಳನ್ನು ನೀಡಲು ಅವಕಾಶವಿರುವುದಿಲ್ಲ. |
| ಇ | ಕಲ್ಪಿಸಿದ್ದಲ್ಲಿ, "ಪಶುಭಾಗ್ಯ" ಯೋಜನೆಯಡಿಯಲ್ಲಿ ಇದುವರೆಗೆ ಎಷ್ಟು ಜನ ಫಲಾನುಭವಿಗಳಿಗೆ "ದೇಶಿ ತಳಿ" ಹಸಗಳನ್ನು ಸಾಕಲು ಅನುದಾನ ಒದಗಿಸಲಾಗಿದೆ; | ಅನ್ವಯಿಸುವುದಿಲ್ಲ. |
| ಈ | "ಪಶುಭಾಗ್ಯ" ಯೋಜನೆಯಡಿಯಲ್ಲಿ ಫಲಾನುಭವಿಯು "ದೇಶಿ ತಳಿ" ಹಸುಗಳನ್ನು ಸಾಕಲು ಮುಂದಾಗುವಂತೆ ಪ್ರೇರೇಪಣೆ ಮತ್ತು ಉತ್ತೇಜನ ನೀಡುವ ಸಲುವಾಗಿ ಸರ್ಕಾರ ಸೂಕ್ತ ಕಾರ್ಯಕ್ರಮ ಮತ್ತು ಯೋಜನೆಗಳನ್ನು ರೂಪಿಸುವುದೇ? | ಪ್ರಸ್ತುತ "ಪಶುಭಾಗ್ಯ" ಯೋಜನೆ ಚಾಲ್ತಿಯಲ್ಲಿರುವುದಿಲ್ಲ. |

ಇ–ಪಸಂಮೀ 29 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು